# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 785/2024

**ಸಾಕ್ಷಿಯನ್ನು ದಿಃ 11.08.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಸಮೀರ್ ಪಾಷ | ಸಿಡಬ್ಲ್ಯೂಃ 4 | ಪಿಡಬ್ಲ್ಯೂಃ 3 |
| ತಂದೆಯ ಹೆಸರು | ಅನ್ವರ್ ಪಾಷ | | |
| ವಯಸ್ಸು | 26 ವರ್ಷ | | |
| ಕೆಲಸ | ನೆಟ್ ವರ್ಕ್ ಇಂಜಿನಿಯರ್ | | |
| ವಾಸಸ್ಥಳ | ಶಬೀರ್ ನಗರ | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ-1 ರಿಂದ 3 ರವರು ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಈ ಪ್ರಕರಣದ ಸಂಬಂಧ ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ. ದಿಃ 13.05.2024 ರಂದು ಬೆಳಿಗ್ಗೆ ಸುಮಾರು 9 ಗಂಟೆಗೆ ನಾನು ಮತ್ತು ಚಾಸಾ-3 ರವರು ಗುರುಪುರಕ್ಕೆ ಬೈಕ್ ನಲ್ಲಿ ಹೋಗುತ್ತಿದ್ದೆವು. ನಾವು ಆಜಾದ್ ನಗರಕ್ಕೆ ಹೋಗುವಾಗ ರಸ್ತೆಯ ಎಡಬದಿಯಲ್ಲಿ ಒಂದು ಮೀನಿನ ಅಂಗಡಿ ಇದ್ದು, ಅಲ್ಲಿ ಚಾಸಾ-1 ಮತ್ತು 2 ರವರು ಮೀನು ಖರೀದಿಸುತ್ತಿದ್ದರು. ಸದರಿ ಮೀನಿನ ಅಂಗಡಿಯು 1ನೇ ಆರೋಪಿಗೆ ಸೇರಿದೆ. ಚಾಸಾ-1 ರವರು 1ನೇ ಆರೋಪಿಯ ಬಳಿ ಮೀನನ್ನು ನೋಡಿ ಇದು ಇವತ್ತಿನದಾ ಅಥವಾ ನಿನ್ನೆಯದಾ ಎಂದು ಕೇಳಿದರು. ಆಗ 1ನೇ ಆರೋಪಿಯು ಮೀನು ಇವತ್ತಿನದಲ್ಲ. 4 ದಿನದ್ದು, ಬೇಕಾದರೆ ತೆಗೆದುಕೊಳ್ಳಿ, ಇಲ್ಲದೇ ಇದ್ದರೇ ಹೋಗಿ ಎಂದು ಹೇಳಿದರು. ಆಗ ಚಾಸಾ-2 ರವರು 1ನೇ ಆರೋಪಿಯ ಬಳಿ ಗ್ರಾಹಕರ ಬಳಿ ಈ ರೀತಿಯಾಗಿ ಮಾತನಾಡಬಾರದು ಎಂದು ಹೇಳಿದರು. ಆಗ 1ನೇ ಆರೋಪಿಯು ನಾನು ಇದೇ ರೀತಿ ಮಾತನಾಡುವುದು, ಬೋಳಿ ಮಕ್ಕಳ ಸೂಳೆ ಮಕ್ಕಳ ಎಂದು ಅವಾಚ್ಯ ಶಬ್ದಗಳಿಂದ ಬೈದು ಕೈಯಲ್ಲಿದ್ದ ಚಾಕುವನ್ನು ತೋರಿಸಿ ಚಾಸಾ-1 ರವರಿಗೆ ಹೊಡೆಯಲು ಬಂದರು. ಆಗ ಚಾಸಾ-2 ರವರು ಸಮಾಧಾನ ಮಾಡಿದರು. ಆಗ 1ನೇ ಆರೋಪಿಯು ತೂಕದ ಬಟ್ಟಿನಿಂದ ಚಾಸಾ-1 ರವರ ಎಡಭಾಗದ ಕೆನ್ನೆಗೆ ಮತ್ತು ಎದೆಯ ಎಡಭಾಗಕ್ಕೆ

ಮತ್ತು ಎಡ ಕೈಗೆ ಹೊಡೆದರು. ಅಲ್ಲದೇ ಮಂಡಿಗೂ ಕೂಡ ಹೊಡೆದರು. ಅದನ್ನು ನಾವೆಲ್ಲರೂ ಬಿಡಿಸಿ ಚಾಸಾ-1 ರವರು ಮತ್ತು 2 ರವರು ಬೈಕ್ ಹತ್ತುವಾಗ 1ನೇ ಆರೋಪಿಯ ಸಹೋದರರಾದ 2 ರಿಂದ 6ನೇ ಆರೋಪಿತರು ಅಲ್ಲಿಗೆ ಬಂದು ಅಟ್ಟಾಡಿಸಿಕೊಂಡು ಚಾಸಾ-1 ಮತ್ತು 2 ರವರಿಗೆ ಹೊಡೆಯಲು ಪ್ರಾರಂಭಿಸಿದರು. ಚಾಸಾ-1 ರವರ ಎದೆಗೆ ಮತ್ತು ಕೈಗೆ ಹೊಡೆದರು. ಚಾಸಾ-2 ರವರಿಗೆ ದೊಣ್ಣೆಯಿಂದ ಕೈಗೆ ಹೊಡೆದರು. ಉಳಿದವರು ಯಾರಿಗೆ ಎಲ್ಲಿಗೆ ಹೊಡೆದರು ಎಂದು ಈಗ ನೆನಪಿಲ್ಲ. ಗಲಾಟೆಯನ್ನು ನಾನು ಮತ್ತು ಚಾಸಾ-3 ರವರು ಬಿಡಿಸಿದರು. ಆಗ ಮನೆಯಿಂದ ಹೊರಗೆ ನಗ್ಮಾ ಮತ್ತು ಶಿರಿನ್ ತಾಜ್ ರವರು ಅವರನ್ನು ಸಾಯಿಸಿ, ಹೊಡೆಯಿರಿ ಎಂದು ಕೊಲೆ ಬೆದರಿಕೆ ಹಾಕಿದರು. ಚಾಸಾ-1 ಮತ್ತು 2 ರವರನ್ನು ನಾವು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರು. ವೈದ್ಯರು ಚಿಕಿತ್ಸೆ ನೀಡಿದರು. ಮೇಲೆ ಹೇಳಿದ ಹೇಳಿಕೆಯನ್ನು ನಾನು ದಿಃ 19.05.2024 ರಂದು ತನಿಖಾಧಿಕಾರಿಯ ಮುಂದೆ ಹೇಳಿದ್ದೇನೆ. ಆದಿನ ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆ ಮತ್ತು ಬಟ್ಟನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ-1 ಮತ್ತು 2ನ್ನು ನೋಡಿ ಗುರುತಿಸುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ಚಾಸಾ-1 ಮತ್ತು 2 ರವರು ಬೈಕನ್ನು ಹತ್ತಿ ಹೋಗುತ್ತಿದ್ದಾಗ 6ನೇ ಆರೋಪಿ ಅವರಿಬ್ಬರನ್ನು ಅಡ್ಡಗಟ್ಟಿ ಹಲ್ಲೆ ಮಾಡಿದರು ಎಂದರೆ ಸರಿ. ಚಾಸಾ-2 ರವರಿಗೆ 1ನೇ ಆರೋಪಿಯು ಅಡ್ಡಗಟ್ಟಿ ದೊಣ್ಣೆಯಿಂದ ಎಡ ಮುಂಗೈಗೆ ಹೊಡೆದರು ಎಂದರೆ ಸರಿ. ಆಗ 3ನೇ ಆರೋಪಿ ಕೈಯಿಂದ ಚಾಸಾ-2 ರವರಿಗೆ ಎದೆಗೆ ಹೊಡೆದರು. ಆಗ 4ನೇ ಆರೋಪಿಯು ಚಾಸಾ-2 ರವರ ಮುಖದ ಭಾಗಕ್ಕೆ, 5ನೇ ಆರೋಪಿಯು ಚಾಸಾ-2 ರವರ ಎದೆಯ ಭಾಗಕ್ಕೆ, 6ನೇ ಆರೋಪಿಯು ಚಾಸಾ-2 ರವರ ಹೊಟ್ಟೆಯ ಭಾಗಕ್ಕೆ ಹೊಡೆದರು ಎಂದರೆ ಸರಿ. ಆ ದಿನ

ಚಾಸಾ-1 ಮತ್ತು 2 ರವರಿಗೆ ಹಲ್ಲೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲು</u>: ಆರೋಪಿತರ ಪರ ಎಸ್ .ಎನ್. ಕೆ ವಕೀಲರಿಂದ:**

ನಾನು ನೆಟ್‌ವರ್ಕ್ ಸೆಕ್ಯೂರಿಟಿ ಇಂಜಿನಿಯರ್ ಆಗಿ ಕೆಲಸ ಮಾಡುತ್ತೇನೆ. ನಾನು ಕಳೆದ 4 ವರ್ಷಗಳಿಂದ ಬೆಂಗಳೂರಿನಲ್ಲಿ ನೈಟ್ ಶಿಫ್ಟ್‌ನಲ್ಲಿ ಕೆಲಸ ಮಾಡುತ್ತೇನೆ. ಘಟನೆಯ ದಿನ ನಾನು ಬೆಳಿಗ್ಗೆ ನನ್ನ ಚಿಕ್ಕಮ್ಮನ ಮನೆಗೆ ಹೋಗುತ್ತಿದ್ದೆ. ನನ್ನ ರಾತ್ರಿ ಪಾಳಳಿ ಕರ್ತವ್ಯದ ಅವಧಿ ರಾತ್ರಿ 8-30 ರಿಂದ ಬೆಳಿಗ್ಗೆ 5-30. ನಾನು ವಾರದ ಕೊನೆಯಲ್ಲಿ ಶನಿವಾರ ಊರಿಗೆ ಬಂದರೆ ಸೋಮವಾರ ಸಂಜೆ 3-00 ಗಂಟೆಗೆ ಹೋಗುತ್ತೇನೆ. ಗಲಾಟೆ ಸೋಮವಾರ ಆಗಿದೆ. ಆ ದಿನ ನಾನು ಶಬೀರ್ ನಗರದ ಮನೆಯಿಂದ ಬೆಳಿಗ್ಗೆ 8-50ಕ್ಕೆ ಹೊರಟ್ಟಿದ್ದೆ. ಆಜಾದ್ ನಗರ ತಲುಪಲು ಸುಮಾರು 15 ರಿಂದ 20 ನಿಮಿಷ ಬೇಕು. ಚಾಸಾ-3 ರವರು ಕೂಡ ಶಬೀರ್ ನಗರದಿಂದ ಹೊರಟಿದ್ದರು. ಅವರು ನನಗೆ 3 ತಿಂಗಳಿಂದ ಸ್ನೇಹಿತರು. ಶಬೀರ್ ನಗರದಲ್ಲಿಯೇ ವಾಸ ಮಾಡುತ್ತಾರೆ. ಅವರು ನನ್ನನ್ನು ನನ್ನ ಮನೆಯಿಂದ ಪಿಕ್ ಮಾಡಿದರು.

ಘಟನೆ ನಡೆಯಿತು ಎನ್ನುವ ಸಮಯದಲ್ಲಿ ನಾವು ಸದರಿ ಮೀನಿನ ಅಂಗಡಿಯ ಬಳಿ ಎಡಭಾಗದಲ್ಲಿ ಹೋಗುತ್ತಿದ್ದೆವು. ಜೋರಾಗಿ ಗಲಾಟೆ ನಡೆಯುತ್ತಿತ್ತು. ಸುಮಾರು 10 ಅಡಿ ದೂರದಲ್ಲಿ ಗಲಾಟೆ ನಡೆಯುತ್ತಿತ್ತು. ಮೀನಿನ ಅಂಗಡಿ ಯಾವುದರಿಂದ ಮಾಡಲ್ಪಟ್ಟಿತ್ತು ಎಂದರೆ ಶಾಮಿಯಾನ ಹಾಕುವ ಕಂಬದಿಂದ ಮಾಡಿತ್ತು. 1ನೇ ಆರೋಪಿ ಚಾಕು ಹಿಡಿದುಕೊಂಡು ಚಾಸಾ-2 ರವರನ್ನು ತಳ್ಳುತ್ತಿದ್ದರು. ಆಗ ನಿಲ್ಲಿಸಿ ಕೇಳಿದಾಗ ಚಾಸಾ-2 ರವರು ವಿಷಯ ತಿಳಿಸಿದರು. ಮೀನನ್ನು ಸಾಮಾನ್ಯ ತೂಕದಿಂದ ತೂಕ ಮಾಡುತ್ತಿದ್ದರು. 1ನೇ ಆರೋಪಿಯು ತೂಕದ ಬಟ್ಟನ್ನು ಚಾಸಾ-1 ರವರ ಎದೆಯ ಮೇಲೆ ಎಸೆದಿದ್ದಾರೆ. ಸುಮಾರು 7 ಅಡಿಯಿಂದ ಎಸೆದರು. ನೀವು ತಡೆಯಲು ಹೋಗಲಿಲ್ಲವೇ ಎಂದರೆ ಏಕಾಏಕಿ ಎಸೆದರು. ಆಗ ನಾವು ಅಂಗಡಿಯ ಬಲಭಾಗದಲ್ಲಿ ನಿಂತಿದ್ದೆವು. ಸುಮಾರು 5 ಅಡಿ ಅಂತರದಲ್ಲಿ ನಿಂತಿದ್ದೆವು. ಅದನ್ನೆಲ್ಲಾ ನಿಂತುಕೊಂಡು ನೋಡುತ್ತಾ ನಿಂತಿದ್ದಿರಾ ಎಂದರೆ ಹೊಡೆಯಲು ಪ್ರಾರಂಭಿಸಿದಾಗ ನಾವು ಬಿಡಿಸಿದೆವು.

ಗಲಾಟೆ ನಡೆಯಿತು ಎನ್ನುವ ಸಮಯದಲ್ಲಿ ಮಹಿಳೆಯರು ಇದ್ದರೆಯೇ ಎಂದರೆ ಇದ್ದರು. ಅವರು ಅಂಗಡಿಯಿಂದ 20 ಅಡಿ ದೂರದಲ್ಲಿರುವ ಮನೆಯ ಹತ್ತಿರ ನಿಂತಿದ್ದರು. ಆ ಇಬ್ಬರು ಮಹಿಳೆಯರ ಮೇಲೆ ಚಾಸಾ–1 ಮತ್ತು 2 ರವರು ಗಲಾಟೆ ಮಾಡಿದರು ಎಂದರೆ ಸರಿಯಲ್ಲ. ಆ ರೀತಿ ಗಲಾಟೆಯಾಗಿತ್ತು ಎಂದು ಚಾಸಾ–2 ರವರು ನನ್ನ ಬಳಿ ಹೇಳಿದ್ದರು ಎಂದರೆ ಸರಿಯಲ್ಲ. ನಾನೇ ಗಲಾಟೆ ನೋಡಿದ್ದೇನೆ. ಮೀನನ್ನು ಎಲೆಕ್ಟ್ರಿಕ್ ಯಂತ್ರದಿಂದ ತೂಕ ಮಾಡುತ್ತಾರೆಯೇ ಹೊರತು ತೂಕದ ಬಟ್‌ಗಳನ್ನು ಉಪಯೋಗಿಸುವುದಿಲ್ಲ ಎಂದರೆ ಸರಿಯಲ್ಲ. ಚಾಸಾ–2 ನಿಮಗೆ ಹೇಗೆ ಗೊತ್ತು ಎಂದರೆ ಅವರು ಪೋಲೀಸ್ ಎಂದು ಗೊತ್ತಿತ್ತು. ಗಲಾಟೆಯಾಗಿದೆ ಎನ್ನುವ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ ಮತ್ತು ಗಲಾಟೆಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ಚಾಸಾ–2 ನನ್ನ ಸ್ನೇಹಿತರಾಗಿರುವ ಕಾರಣ ಅವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ–1 ರ ದೊಣ್ಣೆ ಅಂಗಡಿಯ ಪಕ್ಕದಲ್ಲಿ ಇತ್ತು. ಸದರಿ ದೊಣ್ಣೆ ಎಷ್ಟು ಅಡಿ ಉದ್ದ ಮತ್ತು ಅಗಲ ಇತ್ತು ಎಂದರೆ ಆ ಬಗ್ಗೆ ಹೇಳಲಾಗುವುದಿಲ್ಲ. ಸಾಕ್ಷಿ ಮುಂದುವರಿದು 2ವರೆ ಅಡಿ ಉದ್ದ ಇರಬಹುದು ಎಂದು ನುಡಿಯುತ್ತಾರೆ. ಚಾಕು ಯಾವ ತರಹ ಇತ್ತು ಎಂದರೆ ಮೀನು ತುಂಡು ಮಾಡಲು ಉಪಯೋಗಿಸುವ ಚಾಕು ಆಗಿತ್ತು. ನಾನು ಘಟನೆಯನ್ನು ನೋಡದೇ ಇದ್ದರೂ ಸಹ ಚಾಸಾ–1 ಮತ್ತು 2 ರವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ–1 ಮತ್ತು 2 ನ್ನು ನಾನು ಈ ಹಿಂದೆ ನೋಡದೇ ಇದ್ದರೂ ಕೂಡ ನೋಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ–2ರ ತೂಕದ ಬಟ್ಟು ಒಂದು ಕೆ.ಜಿಯದ್ದಾಗಿತ್ತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.